ನೀಡಲಾಗಿರುತ್ತದೆ. 2006–07ನೇ ಸಾಲಿನ ಶ್ರೇಣಿಗಳಡಿಯಲ್ಲಿ ಇನ್ನು ಫಲಾನುಭವಿಗಳ ಆಯ್ಕೆ ಪ್ರಕ್ರಿಯು ಚಾಲನೆಯಲ್ಲಿದ್ದು ಸಾಲದ ಮೊತ್ತವನ್ನು ಪ್ರಗತಿಗೆ ಅನುಗುಣವಾಗಿ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗುತ್ತದೆ.

ಆ) ಇಲ್ಲ.

535 (1000) ಶ್ರೀ ಕೆ.ಎಸ್. ಕಿರಣ್ ಕುಮಾರ್ (ಕಳ್ಳಂಬೆಳ್ಳ) :– ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಹಾಗಲವಾಡಿ ಕೆರೆಗೆ ಹೇಮಾವತಿ ನಾಲೆಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಹಾಗಲವಾಡಿ ಕೆರೆಯು ಕೃಷ್ಣ ಜಲಾನಯನ ಪ್ರದೇಶದಲ್ಲಿದ್ದು, ಹಾಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿರುತ್ತದೆ. ಪ್ರಸ್ತಾಪಿಸಿರುವ ಕಾಮಗಾರಿಯು ನಾಲೆಯಿಂದ ನೀರನ್ನು ಹಾಗಲವಾಡಿ ಕೆರೆಗೆ ಹರಿಸುವುದಾಗಿದ್ದು, ಇದು ಅಂತರ್ ಕಣಿವೆ ನೀರು ವರ್ಗಾವಣೆಗೆ ಸಂಬಂಧಿಸಿರುತ್ತದೆ.

ಸಣ್ಣ ನೀರಾವರಿ ಇಲಾಖೆಯು ಈ ಕೆರೆಯನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಿ ಕುಡಿಯುವ ನೀರಿನ ಜೊತೆಗೆ ಕೆರೆಯ ಅಚ್ಚುಕಟ್ಟು ಪ್ರದೇಶಕ್ಕೂ ನೀರನ್ನು ಒದಗಿಸಲು ಆದೇಶ ಸಂಖ್ಯೆ : ಸನೀಇ 110 ಕೆಜಿದು 2007, ದಿನಾಂಕ : 23–04–2007 ರಲ್ಲಿ ಆದೇಶ ನೀಡಿರುತ್ತದೆ. ಈ ವಿಷಯವು ಕಾವೇರಿ ಜಲ ವಿವಾದ ಮತ್ತು ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಮುಂದಿನ ಕ್ರಮದ ಹಿನ್ನೆಲೆಯಲ್ಲಿ, ಪರಿಶೀಲಿಸಲಾಗುತ್ತಿದೆ.

ಇ) ರೂ.43.00 ಕೋಟಿಗಳು.